# <u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 420

ಮಾನ್ಯ ಸದಸ್ಯರ ಹೆಸರು : ಶ್ರೀ ಚಿದಾನಂದ್ ಎಂ. ಗೌಡ (ಪದವೀಧರ ಕ್ಷೇತ್ರ)

ಉತ್ತರಿಸುವ ದಿನಾಂಕ : 18.07.2024

ಉತ್ತರಿಸುವ ಸಚಿವರು : ಗೃಹ ಸಚಿವರು

| ಪ್ರಶ್ನೆ | ಉತ್ತರ |
|---|---|
| ಅ) ರಾಜ್ಯದಲ್ಲಿ ಅಪರಾಧ ಚಟುವಟಿಕೆಗಳನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರಾಜ್ಯದಲ್ಲಿ ಅಪರಾಧ ಚಟುವಟಿಕೆಗಳನ್ನು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| ಆ) ಅಪರಾಧ ಹಿನ್ನಲೆಯಲ್ಲಿ ವ್ಯಕ್ತಿಗಳು ಪದೇ ಪದೇ ಅಪರಾಧ ಕೃತ್ಯದಲ್ಲಿ ಭಾಗವಹಿಸುತ್ತಿದ್ದಲ್ಲಿ ಇಂತಹ ವ್ಯಕ್ತಿಗಳ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು; | ಅಪರಾಧ ಹಿನ್ನಲೆಯಲ್ಲಿ ವ್ಯಕ್ತಿಗಳು ಪದೇ ಪದೇ ಅಪರಾಧ ಕೃತ್ಯದಲ್ಲಿ ಭಾಗವಹಿಸುತ್ತಿದ್ದಲ್ಲಿ ಅಂತಹ ವ್ಯಕ್ತಿಗಳ ಮೇಲೆ ಕೈಗೊಳ್ಳಲಾಗುವ ಕ್ರಮ ಕೆಳಗಿನಂತಿದೆ.<br>❖ ಅಪರಾಧ ಹಿನ್ನಲೆಯುಳ್ಳ ವ್ಯಕ್ತಿಗಳ ಮೇಲೆ ಪೊಲೀಸ್ ಠಾಣೆಗಳಲ್ಲಿ ರೌಡಿ ಶೀಟರ್ ಮತ್ತು ಎಮ್.ಓ.ಬಿ ಕಾರ್ಡ್‌ಗಳನ್ನು ತೆರೆದು ನಿರ್ವಹಿಸಿ ಅವರ ಚಲನವಲನಗಳ ಬಗ್ಗೆ ನಿಗಾ ಇರಿಸಲು ಅವರನ್ನು ಆಗಿಂದಾಗ್ಯೆ ತಪಾಸಣೆ ಮಾಡಲಾಗುತ್ತದೆ.<br>❖ ಅಪರಾಧ ಹಿನ್ನಲೆಯುಳ್ಳ ವ್ಯಕ್ತಿಗಳು ಯಾವುದೇ ಪ್ರಕರಣಗಳಲ್ಲಿ ಭಾಗಿಯಾಗದಂತೆ ಅವರುಗಳಿಂದ ಮುಂಜಾಗ್ರತ ಕ್ರಮಕ್ಕಾಗಿ ಭದ್ರತಾ ಕಾಯ್ದೆಯಡಿ ಮುಚ್ಚಳಿಕೆಯನ್ನು ಪಡೆದುಕೊಳ್ಳಲಾಗುತ್ತದೆ.<br>❖ ಹಲವಾರು ಪ್ರಕರಣಗಳಲ್ಲಿ ಭಾಗಿಯಾಗಿರುವ ವ್ಯಕ್ತಿಗಳನ್ನು ಗುರುತಿಸಿ ಅಂತಹ ವ್ಯಕ್ತಿಗಳ ವಿರುದ್ಧ ಕರ್ನಾಟಕ ಪೊಲೀಸ್ ಕಾಯ್ದೆ ಕಲಂ: 55 ಮತ್ತು 56 ರಡಿ ಹೊರ ಜಿಲ್ಲೆ ಗಡಿಪಾರು ಮಾಡಿ ಕ್ರಮ ಕೈಗೊಳ್ಳಲಾಗುತ್ತದೆ.<br>❖ ಹಲವಾರು ಪ್ರಕರಣಗಳಲ್ಲಿ ಭಾಗಿಯಾಗಿರುವ ಸಮಾಜಘಾತಕ ವ್ಯಕ್ತಿಗಳನ್ನು ಗುರುತಿಸಿ ಅಂತಹ ವ್ಯಕ್ತಿಗಳ ವಿರುದ್ಧ ಗೂಂಡಾ ಕಾಯ್ದೆಯಡಿ ಕ್ರಮ ಕೈಗೊಳ್ಳಲಾಗುತ್ತದೆ. |

| | |
|---|---|
| ಇ) ಅಪರಾಧ ಹಿನ್ನಲೆಯ ವ್ಯಕ್ತಿಗಳೊಂದಿಗೆ ಪೊಲೀಸ್ ಇಲಾಖೆ ಸಿಬ್ಬಂದಿ ಸಂಪರ್ಕದಲ್ಲಿದ್ದರೆ ಅವರ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು; | ಇಲಾಖಾ ಸಿಬ್ಬಂದಿಯವರು ಅಪರಾಧ ಹಿನ್ನಲೆಯ ವ್ಯಕ್ತಿಗಳೊಂದಿಗೆ ಸಂಪರ್ಕದಲ್ಲಿ ಇರದಂತೆ ಸೂಕ್ತ ಎಚ್ಚರಿಕೆ ನೀಡಲಾಗುತ್ತಿದೆ. ಆದರೂ ಅಂತಹ ಪ್ರಕರಣಗಳು ಕಂಡು ಬಂದಲ್ಲಿ ಪೊಲೀಸ್ ಇಲಾಖೆ ಸಿಬ್ಬಂದಿಯ ವಿರುದ್ಧ ಕೆಎಸ್ ಪಿಡಿಪಿ ನಿಯಮ 1965/1989 ತಿದ್ದುಪಡಿ ನಿಯಮ 2022 ರಂತೆ ಇಲಾಖಾ ಶಿಸ್ತುಕ್ರಮ ಜರುಗಿಸಲಾಗುವುದು. |
| ಈ) ತುಮಕೂರಿನಲ್ಲಿ ಕ್ರಿಮಿನಲ್ ಚಟುವಟಿಕೆಯಲ್ಲಿ ತೊಡಗಿಸಿ ಕೊಂಡಿದ್ದ ಕಾನ್ಸ್‌ಟೇಬಲ್‌ಗಳ ಮೇಲೆ ಕೈಗೊಂಡ ಕ್ರಮವೇನು; | ಕ್ರಿಮಿನಲ್ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ 08 ಜನ ಕಾನ್ಸ್‌ಟೇಬಲ್‌ಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದ್ದು, ಇಲಾಖಾ ಶಿಸ್ತು ಕ್ರಮ ಕೈಗೊಂಡಿದ್ದು, ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| ಉ) ಕ್ರಿಮಿನಲ್ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ಪೊಲೀಸ್ ಸಿಬ್ಬಂದಿಯನ್ನು ಸೇವೆಯಿಂದ ವಜಾ ಮಾಡುವ ಪ್ರಸ್ತಾವ ಸರ್ಕಾರದ ಮುಂದಿದೆಯೇ; ಇಲ್ಲದಿದ್ದಲ್ಲಿ, ಇಂತಹ ಅಪರಾಧಕ್ಕೆ ನೀಡುವ ಶಿಕ್ಷೆ ಯಾವುದು; | ಕ್ರಿಮಿನಲ್ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ಪೊಲೀಸ್ ಸಿಬ್ಬಂದಿಗಳ ಮೇಲೆ ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ /9/ಸೇಇವಿ/95, ದಿ:26/06/1996 ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ/22/ಸೇಇವಿ/2001, ದಿನಾಂಕ:05/07/2002 ಗಳನ್ವಯ ಕ್ರಮ ಜರುಗಿಸಲಾಗುವುದು. |

ಸಂಖ್ಯೆ: ಹೆಚ್‌ಡಿ 27 ಪಿಸಿಕ್ಯೂ 2024

(**ಡಾ: ಜಿ. ಪರಮೇಶ್ವರ**)
ಗೃಹ ಸಚಿವರು

# ಅನುಬಂಧ-1

## ರಾಜ್ಯದಲ್ಲಿ ಅಪರಾಧ ಚಟುವಟಿಕೆಗಳನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು:

- ರಾಜ್ಯದಲ್ಲಿ ಹೊಸ ಇ-ಬೀಟ್ ಪದ್ಧತಿಯನ್ನು ಅನುಷ್ಠಾನಗೊಳಿಸಿದ್ದು, ಬೀಟ್ ಕಾನ್‌ಸ್ಟೇಬಲ್ ಇ-ಬೀಟ್ ಅನ್ನು ಸಮರ್ಪಕವಾಗಿ ನಡೆಸಲು ಕ್ರಮ ಕೈಗೊಳ್ಳಲಾಗಿದೆ.

- ಅಪರಾಧ ಪ್ರಕರಣಗಳನ್ನು ತಡೆಗಟ್ಟುವ, ನಿಯಂತ್ರಿಸುವ ಹಾಗೂ ತನಿಖೆ ಪ್ರಕ್ರಿಯೆಗಳನ್ನು ಚುರುಕುಗೊಳಿಸಲು ಅನುಕೂಲವಾಗುವಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹೊಸದಾಗಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರು ಅಪರಾಧ ಹುದ್ದೆಗಳನ್ನು ಸೃಜಿಸಲಾಗಿದೆ.

- ಅಪರಾಧ ಪ್ರಕರಣಗಳಲ್ಲಿ ಕೃತ್ಯ ನಡೆದ ಸ್ಥಳಗಳಲ್ಲಿ ವೈಜ್ಞಾನಿಕವಾಗಿ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲು ಅನುಕೂಲವಾಗುವಂತೆ 206 Scene of Crime Officers (SOCO) ರವರನ್ನು ನೇಮಕಮಾಡಿಕೊಳ್ಳಲಾಗಿದೆ.

- ರಾತ್ರಿ ಗಸ್ತಿನಲ್ಲಿ ಅನುಮಾನಾಸ್ಪದ ವ್ಯಕ್ತಿಗಳನ್ನು ಆನ್‌ಲೈನ್ ಮೂಲಕ ಬೆರಳು ಮುದ್ರೆ ತಪಾಸಣೆ ನಡೆಸಲಾಗುತ್ತಿದೆ.

- ಮಹಿಳಾ ಸಹಾಯವಾಣಿ, ಮಕ್ಕಳ ಸಹಾಯವಾಣಿ ಮತ್ತು ಹಿರಿಯ ನಾಗರೀಕರ ಸಹಾಯವಾಣಿಗಳ ಸೇವೆಗಳು ಡೈಲ್ 112 ಸೇವೆ- ತುರ್ತು ಪ್ರತಿಕ್ರಿಯೆ ವ್ಯವಸ್ಥೆ ಮಾಡಲಾಗಿದೆ.

- ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸಂಚಾರ ನಿರ್ವಹಣೆ ಮತ್ತು ಅಪರಾಧ ಹಿನ್ನೆಲೆಯಿರುವ ಆಸಾಮಿಗಳ ಮೇಲೆ ನಿಗಾವಹಿಸುವ ಸಲುವಾಗಿ ಸರ್ಕಾರದ ವತಿಯಿಂದ ಪ್ರಮುಖ ಸ್ಥಳಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಅಳವಡಿಸಿ ಕಣ್ಗಾವಲು ಇರಿಸಲಾಗಿದೆ.

- ಅಂಗಡಿಗಳು, ಮಾಲುಗಳು ಮತ್ತು ಪ್ರಮುಖ ವ್ಯಾಪಾರ ಕಟ್ಟಡಗಳ ಮಾಲೀಕರುಗಳು, ಪಬ್ಲಿಕ್ ಸೇಫ್ಟಿ ಕಾಯ್ದೆ ರೀತ್ಯಾ ಸಿ.ಸಿ.ಟಿ.ವಿ. ಅಳವಡಿಸಿಕೊಳ್ಳಲು ಸೂಚನೆ ನೀಡಲಾಗಿದೆ.

- ಸರಗಳ್ಳತನ ಮಾಡುವ ಎಂ.ಓ.ಬಿ ಗಳ ಪರಿಶೀಲನೆ ತೀವ್ರಗೊಳಿಸಲಾಗಿದೆ. ಸರಗಳ್ಳತನ ನಡೆಯುವ ಅವಧಿ ಮತ್ತು ಪ್ರದೇಶಗಳನ್ನು ಗುರುತಿಸಿ ವಿಶೇಷ ಗಸ್ತು ಹಾಗೂ ನಾಕಾಬಂಧಿ ಏರ್ಪಡಿಸಲಾಗುತ್ತಿದೆ.

- ಎಂ.ಓ.ಬಿ. ಆಸಾಮಿಗಳು, ಪೂರ್ವಸಜಾ ಆಸಾಮಿಗಳು, ರೌಡಿ ಆಸಾಮಿಗಳನ್ನು ಆಗಿಂದಾಗ್ಗೆ ಪರಿಶೀಲನೆ ಮಾಡಿ ಈ ಆಸಾಮಿಗಳ ವಿರುದ್ಧ ಕಲಂ 107, 109, 110 ಸಿಆರ್‌ಪಿಸಿ ರೀತ್ಯಾ ಭದ್ರತಾ ಕಾಯ್ದೆಗಳ ಅಡಿಯಲ್ಲಿ ಪ್ರಕರಣ ದಾಖಲು ಮಾಡಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ.

- ಅಪರಾಧ ತಡೆಗಟ್ಟಲು ಕಮ್ಯೂನಿಟಿ ಪೊಲೀಸಿಂಗ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದೆ.

❖ ಅಪರಾಧ ಕೃತ್ಯಗಳಲ್ಲಿ ತೊಡಗಿರುವ ಜನರ ವಿರುದ್ಧ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಅಪರಾಧಿಗಳ ಮೇಲೆ ಎಂ.ಓ.ಬಿ ಹಾಗೂ ರೌಡಿ ಶೀಟ್ ತೆರೆಯಲಾಗುವುದು ಹಾಗೂ ಪದೇ ಪದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದರೆ ಗಡಿಪಾರು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

❖ ಹೆದ್ದಾರಿ ಗಸ್ತು ಬಲಪಡಿಸಿದ್ದು, ಇದರಿಂದ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸುವ ದರೋಡೆ ಸುಲಿಗೆ ಪ್ರಕರಣಗಳನ್ನು ಗಣನೀಯ ಪ್ರಮಾಣದಲ್ಲಿ ತಡೆಗಟ್ಟಲು ಸಾಧ್ಯವಾಗಿರುತ್ತದೆ. ಅಲ್ಲದೇ ಸದರಿ ರಸ್ತೆಗಳಲ್ಲಿ ರಸ್ತೆ ಅಪಘಾತಗಳು ಸಂಭವಿಸಿದ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಗಾಯಾಳುಗಳನ್ನು ಚಿಕಿತ್ಸೆಗೆ ಸಾಗಿಸಲು ಸಹಾಯಕವಾಗಿರುತ್ತದೆ.

❖ ಪ್ರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಬ್ಯಾಂಕ್/ಎಟಿಎಂ/ಅಂಚೆ ಕಛೇರಿಗಳಲ್ಲಿ ಅಲಾರಂ ಸಿಸ್ಟಂ ಅಳವಡಿಸಿ ಹಾಗೂ ಕಡ್ಡಾಯವಾಗಿ ಸೆಕ್ಯೂರಿಟಿ ಗಾರ್ಡ್ ನೇಮಕ ಮಾಡಿಕೊಳ್ಳುವ ಬಗ್ಗೆ ಸಂಬಂಧಪಟ್ಟವರಿಗೆ ಪೊಲೀಸ್ ನೋಟೀಸ್ ನೀಡಿ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ.

❖ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಬೆಂಗಳೂರು ನಗರದಲ್ಲಿ "ವೀರವನಿತೆ" ತಂಡವನ್ನು ರಚಿಸಿ, ಸದರಿಯವರಿಗೆ 6 ತಿಂಗಳು ನುರಿತ ತಜ್ಞರಲ್ಲಿ ಸ್ವಯಂ ರಕ್ಷಣೆ ಮತ್ತು ಮಾರ್ಷಿಯಲ್ ಆರ್ಟ್ಸ್ ಬಗ್ಗೆ ತರಬೇತಿ ನೀಡಿ, ನಂತರ ಸದರಿಯವರುಗಳನ್ನು 3 ತಂಡಗಳನ್ನಾಗಿ ರಚಿಸಿ ಮೇಲಾಧಿಕಾರಿಗಳ ನೇತೃತ್ವದಲ್ಲಿ ನಗರದ ವಿವಿಧ ಶಾಲಾ-ಕಾಲೇಜುಗಳು ಮತ್ತು ಮಹಿಳೆಯರು ಹೆಚ್ಚಾಗಿ ಕೆಲಸ ನಿರ್ವಹಿಸುವ ಗಾರ್ಮೆಂಟ್ಸ್ ಗಳು, ಮಾಲ್ ಮತ್ತಿತರ ಕಡೆಗಳಲ್ಲಿ ಸದರಿಯವರುಗಳಿಗೆ ಸ್ವಯಂ ರಕ್ಷಣೆಯ ಬಗ್ಗೆ ಮಾಹಿತಿ ಹಾಗೂ ತರಬೇತಿಗಳನ್ನು ನೀಡಲಾಗಿರುತ್ತದೆ.

❖ ಎಲ್ಲ ಶೈಕ್ಷಣಿಕ ಸಂಸ್ಥೆಗಳ, ಶಾಲಾ ಕಾಲೇಜುಗಳ, ಮುಖ್ಯಸ್ಥರಿಗೆ ಭೇಟಿ ಮಾಡಿ ವಿಧ್ಯಾರ್ಥಿನಿಯರಿಗೆ ಕಿರುಕುಳ, ಅತ್ಯಾಚಾರದಂತಹ ಘಟನೆಗಳ ಬಗ್ಗೆ ಜಾಗೃತಿ ಮೂಡಿಸುವ ಕುರಿತು ಆಗಾಗ ಸಭೆಗಳನ್ನು ಆಯೋಜಿಸುವಂತೆ ಸೂಚಿಸಲಾಗಿದೆ ಮತ್ತು ಗ್ರಾಮ ಸಭೆಗಳು, ಸಾರ್ವಜನಿಕ ಸಭೆಗಳಲ್ಲಿಯೂ ಸಹ ಈ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ.

❖ ವಿದ್ಯಾರ್ಥಿನಿಯರು ಇರುವ ಹಾಸ್ಟೆಲ್‌ಗಳ ಕಡೆಗೆ ಹಾಗೂ ಜನವಸತಿ ಪ್ರದೇಶಗಳಲ್ಲಿ ವಿಶೇಷ ಗಸ್ತು ನೇಮಿಸಿ ಮಹಿಳಾ ಸಿಬ್ಬಂದಿಯಿAದ ಮೇಲಿಂದ ಮೇಲೆ ಭೇಟಿ ಕೊಡುವಂತೆ ನೋಡಿಕೊಳ್ಳಲಾಗಿದೆ.

❖ ಸೈಬರ್ ಅಪರಾಧಗಳನ್ನು ತಡೆಗಟ್ಟುವ ಸಲುವಾಗಿ ಸಿಐಡಿ ಕಛೇರಿಯಲ್ಲಿ Centre for Cybercrime Investigation Training & Research (CCITR) ಘಟಕವನ್ನು ಪ್ರಾರಂಭಿಸಲಾಗಿದ್ದು, ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

❖ ಸೈಬರ್ ಅಪರಾಧ ಪ್ರಕರಣಗಳಲ್ಲಿ ವಂಚನೆಗೊಳಗಾದ ನೊಂದವರ/ಶೋಷಿತರ ಅನುಕೂಲಕ್ಕಾಗಿ ಪ್ರತಿ ಜಿಲ್ಲೆಯಲ್ಲಿ ಹಾಗೂ ನಗರ ವ್ಯಾಪ್ತಿಯಲ್ಲಿ ಒಂದೊAದು ವಿಶೇಷ ಸೈಬರ್ ಪೊಲೀಸ್ ಠಾಣೆಗಳನ್ನು ತೆರೆಯಲಾಗಿದೆ.

❖ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸೈಬರ್ ಅಪರಾಧಗಳ ಬಗ್ಗೆ ಆಗಿಂದ್ದಾಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

❖ ಸಾರ್ವಜನಿಕರಿಗೆ ಸೈಬರ್ ಕ್ರೈಂ ಕುರಿತು ಅರಿವು ಮೂಡಿಸಲು ಟಿ.ವಿ ಮಾಧ್ಯಮ, ದಿನಪತ್ರಿಕೆ, ಫೇಸ್ ಬುಕ್, ಹಾಗೂ ಬ್ಯಾಂಕ್ ಅಧಿಕಾರಿಗಳ ಸಹಬಾಗಿತ್ವದಲ್ಲಿ ಮತ್ತು ಪೊಲೀಸ್ ಇಲಾಖೆಯ ಟ್ವೀಟರ್ ಖಾತೆಯ ಮೂಲಕ ಮುಂಜಾಗ್ರುತಾ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತಿದೆ.

❖ ಸೈಬರ್ ಅಪರಾಧ ಘಟಿಸಿದ ಕೂಡಲೆ "ಗೋಲ್ಡನ್ ಅವರ್" ಬಗ್ಗೆ ಜಾಗೃತಿ ಮೂಡಿಸಲಾಗಿದೆ.

❖ ಸೈಬರ್ ಸೆಕ್ಯೂರಿಟಿ ಬಗ್ಗೆ ಹೆಚ್ಚು ಗಮನ ಹರಿಸುತ್ತಿದ್ದು ಸಾರ್ವಜನಿಕರಿಗೆ ಈ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಹಾಗೂ ರಾಜ್ಯದ ವಿವಿಧ ಉದ್ಯಮಿದಾರರಿಗೆ ಜಾಗೃತಿ ಮೂಡಿಸುವ ಸಲುವಾಗಿ ಇ-ಮೇಲ್ ಜಾಗೃತಿ ಸಂದೇಶಗಳನ್ನು (Alert Messages) ಕಳುಹಿಸಿಕೊಡಲಾಗಿರುತ್ತದೆ.

❖ ಕಾನೂನು ಬಾಹೀರ ಚಟುವಟಿಕೆಗಳಲ್ಲಿ ಬಳಸಿಕೊಳ್ಳಲಾದ ಮೊಬೈಲ್ ಸೇವೆಗಳನ್ನು ಅಮಾನತ್ತು ಗೊಳಿಸುವ ಕುರಿತು ಕೇಂದ್ರ ಗೃಹ ಮಂತ್ರಾಲಯವು ಅನುಷ್ಠಾನಗೊಳಿಸಲಾಗಿರುವ NCRP ((National Cybercrime Reporting Portal) ಬಳಸಿಕೊಳ್ಳುವಂತೆ ರಾಜ್ಯದ ಎಲ್ಲಾ ಘಟಕಾಧಿಕಾರಿಗಳಿಗೆ ಸುತ್ತೋಲೆ ಹೊರಡಿಸಲಾಗಿದೆ.

# ಅನುಬಂಧ-2

| Sl. No. | Name of the officer and rank | Police station, crime No. & Section of Law | Details of the cases | Present status of the case | DE Started or not |
|---|---|---|---|---|---|
| 1. | Sri. Manjunath H N CPC 245, | Kibbanahally cross PS CR No 78/2022 u/s 354(a), 354(b), 448, 509, 506 IPC and 3(1)(w)(i)(ii), 3(2)(va) Sc/St(PA) act. | On.28-06-2022 Smt. Gayithri was in her Hotel, at about 9-00 am accused Manjunatha went to hotel and hugged her when she was working and threatened to close their hotel. If disclosed to anybody. | Pending trail in Spl. CC No. 497/2022 | Started |
| 2. | Smt. Raani, WPC 422 | Huliyar PS 165/2022 u/s 120(b), 302, 201 r/w 34 IPC | Accused Rani and Sudha together working in Huliyar Police station, Rani conspired with Manjunatha and Nikhesh to kill Sudha due to personnel enmity. On 13/09/2022 Manjunatha and Nikhesh took Sudha in car and stabbed, tighed with a rope and killed near Milanahally village, beside Arasikere Tiptur road and body was thrown near bush. | Pending Trail in CC No. 4355/2022 | Started |
| 3. | Smt. Raani, WPC 422, | Huliyar PS 196/2022 u/s 406, 408, 420 IPC | Accused Rani performing court duty at Huliyar Police station, she misappropriated cash Rs. 21,020/- and other articles which was seized in Huliyar police station Crime number 168/2020. | UI | started |
| 4. | Sri. Chidananda Swamy, CPC 895 | Tumkur Women PS CR No. 23/2022 u/s 498(a), 494, 323, 506 IPC | Accused Chidananda got married Roopa by saying that he got divorced. after marrying he started to torture every day by consuming alcohol. | Pending Trail in CC No. 4323/2022 | Not started |

| | | | | | |
|---|---|---|---|---|---|
| 5. | Sri. Sunil Kumar, CPC 287 | Tumkur Women PS Cr No 173/2023 u/s 498(a), 323, 324, 504, 506, 506(b), IPC and 03& 04 DP Act | Accused Sunil kumar tortured his wife smt. Sahana every day demand for dowry since 1 year. | UI | Started |
| 6. | Sri. Basavaraju Kaali CPC 1070 | Tumkur Women PS Cr No 186/2023 u/s 354, 417, 506, 376 IPC | Accused Basavaraja kaali and complainant Shruthi Kadam were childhood friends and love each other and had a physical relation, accused promise to marry her and cheated. | UI | Started |
| 7. | Sri.Santhosh H, CPC 391 | Saagara Town PS CR No 231/2023 u/s 323, 342, 307, 498(a), 504, 506 IPC r/w 149 3 & 4 D.P Act. | Accused Santhosh H tortured his wife smt. Ranjitha R every day demand for dowry | UI | Started |
| 8. | Narasimha murthi V,K CPC 1033 | Hassan (Di)<br><br>Arasikere ( R) ps<br><br>CR No 16/2024 u/s 323, 504, 498(a), 307, 34 IPC r/w 3 & 4 D.P Act-1961 | Accused Narasimha murthi V,K tortured his wife smt.Rankshitha every day demand for dowry | UI | Started |